

# ಅಪ್ರಾಪ್ತ ವಯಸ್ಸಿನ ತಾಯ್ತನ ಹಲವು ಸಮಸ್ಯೆಗಳಿಗೆ ಆಹ್ವಾನ

**ಹದಿಹರೆಯದ ಬಾಲಕಿಯರು ಗರ್ಭಿಣಿಯಾಗುತ್ತಿರುವ ಘಟನೆಗಳು ಇತ್ತೀಚೆಗೆ ಹೆಚ್ಚುತ್ತಿದೆ. ಕೊರೊನೋತ್ತರ ಬಿಕ್ಕಟ್ಟುಗಳಲ್ಲಿ ಇದೂ ಒಂದು. ಹದಿನೆಂಟು ತುಂಬುವ ಮೊದಲೇ ತಾಯ್ತನ ಅನುಭವಿಸಿದರೆ ಮುಂದೆ ಆರೋಗ್ಯದ ಸಮಸ್ಯೆಗಳು ಉಂಟಾಗಬಹುದು.**

**■ ಡಾ. ವೀಣಾ ಎಸ್. ಭಟ್**

ಇದು ಇತ್ತೀಚೆಗೆ ನಡೆದ ಘಟನೆ. ಹದಿಹರೆಯದ ಹುಡುಗಿಗೆ ತುಂಬಾ ವಾಂತಿ ಎಂದು ತಾಯಿ ಜೊತೆ ನನ್ನ ಆಸ್ಪತ್ರೆಗೆ ಬಂದಿದ್ದರು. ಹುಡುಗಿಯನ್ನು ತಪಾಸಣೆ ಮಾಡಿದಾಗ ಈಕೆ ಗರ್ಭಿಣಿ ಇರಬಹುದು ಎನಿಸಿತು. ಸ್ಕ್ಯಾನಿಂಗ್ ಮಾಡಿದಾಗ ಹುಡುಗಿ ಗರ್ಭಿಣಿ ಎಂಬುದು ಸ್ಪಷ್ಟವಾಯಿತು. ಈ ವಿಷಯವನ್ನು ತಾಯಿಗೆ ಹೇಳಿದಾಗ ತಾಯಿ ತಲೆತಿರುಗಿ ಬಿದ್ದೇಬಿಟ್ಟರು.

ಇಂದು ಸಂತಾನೋತ್ಪತ್ತಿ ಸಾಮರ್ಥ್ಯ ಕಡಿಮೆಯಾಗುತ್ತಿದೆ. ಈ ಸಂಗತಿ ಹದಿವಯಸ್ಸಿಗೂ ನಿಜ ಆದರೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹದಿವಯಸ್ಸಿಗೇ ಇಪ್ಪತ್ತು ಲಕ್ಷಕ್ಕೂ ಹೆಚ್ಚು ಹೆಣ್ಣು ಮಕ್ಕಳಲ್ಲಿ ಗರ್ಭಧಾರಣೆ ಆಗುತ್ತಿದೆ. ಎಲ್ಲೋ ಆಗೋ ಈಗೋ ಒಂದೊಂದು ಘಟನೆಗಳು ಮಾಧ್ಯಮದಲ್ಲಿ ಬೆಳಕಿಗೆ ಬಂದು ಸ್ವಲ್ಪ ಸದ್ದು ಮಾಡುತ್ತಾ ಹಾಗೆಯೇ ಮಾಸಿಹೋಗಿ ಮತ್ತೆ ಮತ್ತೆ ಅಂತಹ ಘಟನೆಗಳೇ ಮರುಕಳಿಸುತ್ತಿವೆ. ನಮ್ಮಂತಹ ಸ್ತ್ರೀರೋಗ ತಜ್ಞರಿಗಂತೂ, ಇನ್ನೂ ಎಳೆವಯಸ್ಸಿನ ಬಾಲೆಯರೇ ಗರ್ಭ ಧರಿಸಿ ಬರುವುದು, ಅವರಿಗೆ ಈ ಬಗ್ಗೆ ತಿಳಿಹೇಳುವ ಮೊದಲೇ ಅವರು ಚಿಕಿತ್ಸೆಯನ್ನೇ ನಿರಾಕರಿಸಿ ಬೇರೆ ವೈದ್ಯರ ಮೊರೆಹೋಗುವುದು, 18 ವರ್ಷದೊಳಗೆ ಗರ್ಭಧಾರಣೆಯಾದರೆ ಆರಕ್ಷಕ ಠಾಣೆಗೆ ಮಾಹಿತಿ ನೀಡುವುದು ಇವೆಲ್ಲಾ ಸಾಮಾನ್ಯ ಸಂಗತಿಗಳಾಗಿ ಬಿಟ್ಟಿವೆ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಶೇ.11ರಷ್ಟು ಗರ್ಭಧಾರಣೆ 20 ವರ್ಷದೊಳಗಿನ ಹೆಣ್ಣು ಮಕ್ಕಳಲ್ಲಿ ಆಗುತ್ತಿದ್ದು, ಬಡ, ಮಧ್ಯಮ ವರ್ಗದಲ್ಲಿ, ಇಂತಹ ಘಟನೆಗಳು ಹೆಚ್ಚು. ಭಾರತ ದೇಶವಂತೂ ಹದಿವಯಸ್ಸಿನ ಗರ್ಭಧಾರಣೆಯಲ್ಲಿ ಮುಂಚೂಣಿಯಲ್ಲಿದೆ. ನಾಲ್ಕನೆಯ ಕೌಟುಂಬಿಕ ಆರೋಗ್ಯ ಸಮೀಕ್ಷೆಯ ಪ್ರಕಾರ ಸುಮಾರು ಶೇ.11.8 ದಶಲಕ್ಷ ಹದಿವಯಸ್ಸಿನ ಗರ್ಭಧಾರಣೆಗಳಾಗಿವೆ. ಇದಕ್ಕೆ ಮುಖ್ಯ ಕಾರಣ ಬಾಲ್ಯವಿವಾಹ, ಬಡತನ, ಅಸಮರ್ಪಕ ಲೈಂಗಿಕ ಮಾಹಿತಿ, ಅಜ್ಞಾನ, ಅನಕ್ಷರತೆ, ಅಸಮರ್ಪಕ ಆರೋಗ್ಯಸೇವೆ ಇವೆಲ್ಲವೂ ಆಗಿವೆ.

ಹೆಚ್ಚಿನ ಮಕ್ಕಳು ಹದಿವಯಸ್ಸಿನಲ್ಲಿಯೇ ಉದ್ರೇಕಕಾರಿ ಅಂಶಗಳಿಗೆ ತೆರೆದುಕೊಂಡು ಅಸುರಕ್ಷಿತ ಲೈಂಗಿಕತೆಯಲ್ಲಿ ತೊಡಗುವುದು,